# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 533
2. ಸದಸ್ಯ ರಹೆಸರು : ಶ್ರೀ ವಿಜಯ ಸಿಂಗ್
3. ಉತ್ತರಿಸಬೇಕಾದ ದಿನಾಂಕ : 24.09.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಅ | ಕಳೆದ ಎರಡು ವರ್ಷಗಳಿಂದ ಬೀದರ್ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯಲು ನಿಷೇಧ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಬಂದಿದ್ದಲ್ಲಿ, ಯಾವ ಆಧಾರದ ಮೇಲೆ ಈ ನಿಷೇಧವನ್ನು ಮಾಡಲಾಗಿದೆ; ಇದರಿಂದ ಜನ ಸಾಮಾನ್ಯರಿಗೆ ಹಾಗೂ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯು ಸತತ ಮೂರು ವರ್ಷಗಳಿಂದ ಬರಗಾಲವನ್ನು ಎದಿರುಸುತ್ತಿದ್ದು, 2018-19ನೇ ಸಾಲಿನಲ್ಲಿ ಬರ ಪರಿಸ್ಥಿತಿಯಿಂದಾಗಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು, 2019-20ನೇ ಸಾಲಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದೇ ಜಿಲ್ಲೆಯ ಅಣೆಕಟ್ಟು, ಕೆರೆಕಟ್ಟೆ ಹಾಗೂ ಬಾವಿಗಳಲ್ಲಿ ನೀರಿನ ಶೇಖರಣೆ ಆಗಿರುವುದಿಲ್ಲ. |
| ಇ | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು? | ಕಳೆದ 10 ವರ್ಷಗಳಿಂದ ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವು ಗಣನೀಯವಾಗಿ ಕುಸಿಯುತ್ತಿರುವುದರಿಂದ, ಮುಂಬರುವ ದಿನಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗುವುದನ್ನು ನಿವಾರಿಸಲು ಸಾರ್ವಜನಿಕ ಹಿತದೃಷ್ಟಿಯಿಂದ ಹೊಸ ಕೊಳವೆ ಬಾವಿ ಕೊರೆಯುವುದನ್ನು ನಿಷೇಧಿಸಿ ದಿನಾಂಕ: 15.02.2020ರಂದು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿರುತ್ತಾರೆ. ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿ ದಿನಾಂಕ: 20.03.2020ರಂದು ಪರಿಷ್ಕೃತ ಆದೇಶವನ್ನು ಹೊರಡಿಸಿದ್ದು ಸರ್ಕಾರದ ವಿವಿದ ಯೋಜನೆಯಡಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೊರೆಯುವ ಹೊಸ ಕೊಳವೆ ಬಾವಿಗಳನ್ನು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಕೊರೆಯಲು ಅನುಮತಿಸಲಾಗಿದೆ.<br>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಕಡತ ಸಂಖ್ಯೆ: MID 52 LCQ 2020

**(ಜೆ.ಸಿಮಾಧುಸ್ವಾಮಿ)**
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಶ್ರೀ ವಿಜಯಸಿಂಗ್, ಮಾನ್ಯ ವಿಧಾನ ಪರಿಷತ್ತ್ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:533ಕ್ಕೆ ಅನುಬಂಧ

## ಜಿಲ್ಲಾಧಿಕಾರಿ ಬೀದರ ಜಿಲ್ಲೆ, ಬೀದರ ರವರ ನಡುವಳಿ

ವಿಷಯ: ಜಿಲ್ಲೆಯ ಜಿಲ್ಲಾದ್ಯಂತ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದುದನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿ ಪತ್ರ ಆದೇಶ ಸಂ.ಕಂ/ಸಿ.ಎ.ಎಲ್/ಸಿಆರ್- /2019-20 ದಿನಾಂಕ: 09/03/2020

* * * * * *

ಪೀಠಿಕ :

ಜಿಲ್ಲೆಯಲ್ಲಿ ಸತತವಾಗಿ 3 ವರ್ಷಗಳಿಂದ ಬರ ಪರಿಸ್ಥಿತಿಯಿಂದ ಮತ್ತು 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದೆ ಜಿಲ್ಲೆಯ ಆಣೆಕಟ್ಟು, ಕೆರೆಕಟ್ಟೆ ಹಾಗೂ ಬಾವಿಗಳಲ್ಲಿ ನೀರಿನ ಶೇಖರಣೆ ಆಗಿರುವುದಿಲ್ಲ. ಗಣನೀಯವಾಗಿ ಅಂತರ್ಜಲ ಮಟ್ಟವು ಕುಸಿಯುತ್ತಿರುವುದರಿಂದ ಗಿ ಮುಂಬರುವ ದಿನಗಳಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗುವುದನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಉಲ್ಲೇಖಿತ ದಿನಾಂಕ 09.03.2020 ರ ಆದೇಶದಂತೆ ಜಿಲ್ಲಾದ್ಯಂತ ಹೊಸ ಕೊಳವೆ ಬಾವಿಗಳನ್ನು ನಿಷೇಧಿಸಿ ಆದೇಶಿಸಲಾಗಿತ್ತು.

ಈ ಬಗ್ಗೆ ಜನಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿ ಸದರಿ ಆದೇಶವನ್ನು ಹಿಂಪಡೆಯಲು ಕೋರಿರುತ್ತಾರೆ. ಆದರಿಂದ ಜಿಲ್ಲಾದ್ಯಂತ ಹೊಸ ಕೊಳವೆ ಬಾವಿಗಳನ್ನು ನಿಷೇಧಿಸಿರುವ ಆದೇಶವನ್ನು ಪರಿಷ್ಕರಿಸಿ ಗ್ರಾಮೀಣ ಪ್ರದೇಶದಲ್ಲಿ ಹೊಸ ಕೊಳವೆ ಬಾವಿಗಳ ಕೊರೆಯಲು ಈ ಕೆಳಕಂಡಂತೆ ಆದೇಶಿಸಿದೆ.

:: ಆದೇಶ ::

ಸಂ.ಕಂ/ಸಿ.ಎ.ಎಲ್/ಸಿಆರ್- /2019-20 ದಿನಾಂಕ: 20/03/2020

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದನ್ನು ನಿಷೇಧಿಸಿ ಹೊರಡಿಸಿದ ಆದೇಶವನ್ನು ಪರಿಷ್ಕರಿಸಿ ಸರ್ಕಾರದ ವಿವಿಧ ಯೋಜನೆಯಡಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೊರೆಯುವ ಹೊಸ ಕೊಳವೆ ಬಾವಿಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕೊರೆಯಲು ಆದೇಶಿಸಿದೆ.

ಷರತ್ತುಗಳು :

1. ಸರ್ಕಾರದ ವಿವಿಧ ಇಲಾಖೆ ನಿಗಮ ಮಂಡಳಿಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಹಾಗೂ ಸಾರ್ವಜನಿಕ ಯೋಜನೆಗಳಿಗೆ ನಿಷೇಧ ಅನ್ವಯಿಸುವುದಿಲ್ಲ.
2. ನಗರ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯುವುದು ನಿಷೇಧಿಸಿದ ಆದೇಶ ಯಥಾಪ್ರಕಾರ ಮುಂದುವರೆಯುವುದು, ಪೂರ್ವಾನುಮತಿ ಇಲ್ಲದೆ ಕೊಳವೆ ಬಾವಿ ಕೊರೆಯುವುದನ್ನು ನಿಷೇಧಿಸಿದೆ.
3. ಸರ್ಕಾರದ ವಿವಿಧ ಯೋಜನೆಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಂದ 500 ಮೀ ಅಂತರ ಕಡ್ಡಾಯವಾಗಿ ಕಾಪಾಡತಕ್ಕದ್ದು.
4. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ರೈತರ ಜಮೀನಿನಲ್ಲಿ ಈಗಾಗಲೆ ಇರುವ ಜಲ ಮೂಲಗಳಿಂದ 250 ಮೀ ಅಂತರ ಕಡ್ಡಾಯವಾಗಿ ಕಾಪಾಡತಕ್ಕದ್ದು.
5. ಗ್ರಾಮಗಳಲ್ಲಿ ಅಥವಾ ರೈತರ ಜಮೀನುಗಳಲ್ಲಿ ಈಗಾಗಲೆ ಇರುವ ತೋಡು ಬಾವಿಗಳಿಂದ 180 ಮೀ ಅಂತರ ಕಾಪಾಡುವುದು.
6. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಸಾರ್ವಜನಿಕರು/ರೈತರು ಮುಂಗಡವಾಗಿ ಹಿರಿಯ ಭೂ ವಿಜ್ಞಾನಿಗಳಿಂದ ಅಭಿಪ್ರಾಯ ಕಡ್ಡಾಯವಾಗಿ ಪಡೆಯತಕ್ಕದ್ದು.

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ.

ಇವರಿಗೆ

1. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು. ಜಿಲ್ಲಾ ಪಂಚಾಯತ, ಬೀದರ.
2. ಜಿಲ್ಲಾ ಪೊಲೀಸ್ ಅಧಿಕ್ಷಕರು. ಬೀದರ.
3. ಸಹಾಯಕ ಆಯುಕ್ತರು ಬೀದರ/ಬಸವ್ಕಲ್ಯಾಣ.
4. ಯೋಜನಾ ನಿದೇಶಕರು ಜಿಲ್ಲಾ ನಗರಾಭಿವೃಧಿ ಕೋಶ . ಬೀದರ.
5. ಆಯುಕ್ತರು ನಗರ ಸಭೆ ಬೀದರ/ಬಸವಕಲ್ಯಾಣ.
6. ಉಪ ನಿರ್ದೇಶಕರು ಹಿರಿಯ ಭೂವಿಜ್ಞಾನಿ. ಗಣಿ ಮತ್ತು ಭೂವಿಜ್ಞಾನ ಇಲಾಖೆ. ಬೀದರ.
7. ತಹಸೀಲ್ದಾರರು ಬೀದರ/ಭಾಲ್ಕಿ/ಬಸವಕಲ್ಯಾಣ/ಹುಮನಾಬಾದ/ಔರಾದ.
8. ಸಹಾಯಕ ನಿರ್ದೇಶಕರು ವಾರ್ತ ಮತ್ತು ಪ್ರಚಾರ ಇಲಾಖೆ ಇವರಿಗೆ ರವಾನಿಸುತ್ತ ಸದರಿ ವಿಷಯವನ್ನು ದಿನ ಪತ್ರಿಕೆಗಳಲ್ಲಿ ಪ್ರಚುರು ಪಡಿಸಲು ಸೂಚಿಸಿದೆ.
9. ಪರಿಸರ ಅಧಿಕಾರಿಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳ ಬೀದರ
10. ವ್ಯವಸ್ಥಾಪಕರು, ಡಾ.ಬಿ.ಆರ್. ಅಂಬೇಡಕರ /ಡಿ ದೇವರಾಜ ಅರಸು /ಎಸ್.ಸಿ ಎಸ್.ಟಿ ಅಭಿವೃಧಿ ನಿಗಮ ಬೀದರ.